





ಎಲ್ಲಾ ಕೊಳಗಳನ್ನು ಹಾದು ಹೋಗುತ್ತದೆ. ಈ ಸಪ್ತಕೊಳಗಳ ನಡುವೆ ಸಾರಗಳ ಮೂಲಕ ಅತ್ಯುತ್ತಮ ಜಲಸಂಪರ್ಕವನ್ನು ಕಲ್ಪಿಸಲಾಗಿದೆ. ಕಲ್ಲಿನಿಂದ ನಯವಾಗಿ ಕೊರೆದ ಈ ಸಪ್ತಕೊಳಗಳ ತಳ ವಿನ್ಯಾಸಗಳು ವಿಚಿತ್ರವಾಗಿವೆ. ನಕ್ಷತ್ರದಾಕಾರ, ಕಮಲದಾಕಾರದ ತಳದ ಈ ಕೊಳಗಳ ವಿನ್ಯಾಸಗಳು ಅಚ್ಚರಿ ಮೂಡಿಸುತ್ತವೆ. ಸಪ್ತಕೊಳಗಳ ನೀರು ಅಂತಿಮವಾಗಿ ದಕ್ಷಿಣದ ಕಡೆ ಹರಿಯುತ್ತ ಕಾಂಪೌಂಡ್ ಆಚೆಯ ಅಡಿಕೆ ತೋಟವನ್ನು ಪ್ರವೇಶಿಸುತ್ತದೆ.

ಬಿದನೂರನ್ನು ಕೆಳದಿಯ ಅರಸರು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಬಿದನೂರಿಗೆ ಬಿದಿರೂರು, ವೇಣುಪುರ ಎಂಬ ಹೆಸರುಗಳಿವೆ. ದೇವಗಂಗೆ ಕೆಳದಿ ಅರಸರ ಉಪನಗರವಾಗಿತ್ತು. ಅದಕ್ಕೆ ಮತ್ತೊಂದು ಹೆಸರು ಬಸವನ ಬೈನೆ. ಬೈನೆ ಎಂದರೆ ದೇವಗಂಗೆ. ಎತ್ತು, ಹಸುಗಳು ನೀರು ಕುಡಿಯುವ ಸ್ಥಳ ಎಂದರ್ಥ. ಇಂಥ ಜಾಗವನ್ನು ಕೆಳದಿಯ ಅರಸರು ತಮ್ಮ ಕುಟುಂಬದ ಸದಸ್ಯರಿಗೆ ಜಲಕ್ರೀಡೆಯಂಥ ಮನರಂಜನೆಗಾಗಿ ಮೀಸಲಾಗಿಟ್ಟುಕೊಂಡಿದ್ದರು. ಬೇಸಿಗೆಯ ದಿನಗಳಲ್ಲಿ ದೇವಗಂಗೆ ಅವರಿಗೆ ಸ್ನಾನ ಮಾಡುವ ಕೊಳವಾಗಿ ಉಪಯೋಗವಾಗುತ್ತಿತ್ತು.

ದೇವಗಂಗೆ ಕೊಳದ ಪರಿಸರ ಪ್ರಶಾಂತವಾಗಿದೆ. ಪ್ರಾಂಗಣದೊಳಗೆ ಹುಲ್ಲಿನ ಹಾಸಿಗೆ ಇದೆ. ಗಿಡ ಮರಗಳ ನೆರಳಿದೆ. ಇಲ್ಲಿಗೆ ಬಂದವರು ಕೆಲಸಮಯ ಕಾಲ ಕಳೆದು ಸಂತಸಪಡುತ್ತಾರೆ. ನೆರಳಿಗೆ ಕುಳಿತು ಊಟ ಮಾಡುತ್ತಾರೆ ಕೆಲವರು ಸ್ನಾನ ಮಾಡುತ್ತಾರೆ.